(ಇಂದು ದಿನಾಂಕಃ 17–07–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ -

7) ದಾವಾ ಆಸ್ತಿಯ ಮೂಲ ಸರ್ವೆ ಸಂಖ್ಯೆ 71/1+2 ಎ+2 ಬಿ/2+3 ಸಾಕ್ಷಿಯು ಮುಂದುವರೆದು ಅದು 14 ಎಕ್ರೆ 24 ಗುಂಟೆ ಎಂದು ನುಡಿಯುತ್ತಾರೆ. ಸದರಿ ಮೂಲ ಸರ್ವೆ ಸಂಖ್ಯೆಯಲ್ಲಿ ವಿಭಾಗವಾಗಿ 71/1, 71/2, 71/3, 71/4 ಭಾಗಗಳು ಆಗಿರುತ್ತವೆ. *(ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ನೀಡಿ ಅದರಲ್ಲಿ ಯಾರು ಹೆಸರು ಇದೆ ಎಂದು ಕೇಳಲಾಗಿ ಸಾಕ್ಷಿಯು ಸಂಮಜಸವಾದ ಉತ್ತರ ನೀಡುತ್ತಿಲ್ಲ)* ಪುನಃ ಸಾಕ್ಷಿಗೆ ಸದರಿ ದಾಖಲೆಯನ್ನು ನೀಡಿ ಅದರಲ್ಲಿ ಸರ್ವೆ ಸಂಖ್ಯೆ 71/1 ಕ್ಕೆ ಬಸವಂತಪ್ಪ, ಪರಪ್ಪ, ದೇವಪ್ಪ, ಈರವ್ವ ಪಾಟೀಲ ರವರ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ಅದರ ಕ್ಷೇತ್ರ 03 ಎಕ್ರೆ 34 ಗುಂಟೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಮಹಾದೇವಪ್ಪ, ಚಂದ್ರಶೇಖರಪ್ಪ ರವರ ಹೆಸರು ಇರುವುದಿಲ್ಲ.

8) ಈರವ್ವ ಗಡಿಯೆಪ್ಪಗೌಡ ಕುಲಕರ್ಣಿ ರವರು 9 ನೇ ಪ್ರತಿವಾದಿಯ ಸೋದರಅತ್ತೆ ಎಂದರೆ ಸರಿ. ಈರವ್ವ ಮತ್ತು ನನಗೆ ಯಾವುದೇ ರಕ್ತ ಸಂಬಂದವಿಲ್ಲ ಅಂದರೆ ಇರಬಹುದು. ಸರ್ವೆ ಸಂಖ್ಯೆ 71/3 ರ ಮೂಲ ಕ್ಷೇತ್ರ 03 ಎಕ್ರೆ 38 ಗುಂಟೆ ಅದರಲ್ಲಿ ಪಿ.ಕೆ. 6 ಗುಂಟೆ ಇರುತ್ತದೆ. ಸಾಕ್ಷಿಗೆ ಈಗ ನಿಪಿ-13 ನ್ನು ತೋರಿಸಿ ಅದು ನಮ್ಮ ಮನೆತನಕ್ಕೆ ಹೇಗೆ ಬಂದಿರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. *(ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ ಸಾಕ್ಷಿಯು ಅದರಲ್ಲಿ ದಾಖಲೆಗಳನ್ನು ಹುಡುಕುವ ಬದಲು ಬೇರೆ ಅಸಂಮಜಸವಾದ ವಿವರಣೆಯನ್ನು ನೀಡುತ್ತಾ ಬಂದಿದು ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಿದ್ದು ಸಾಕ್ಷಿಗೆ ಅಂತಿಮ ಅವಕಾಶ ನೀಡಲಾಗಿರುತ್ತದೆ.)*

9) ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ ಸಾಕ್ಷಿಯು ನಿಪಿ-7 ಮತ್ತು ನಿಪಿ-19 ನ್ನು ತೋರಿಸುತ್ತಾರೆ. ಸರ್ವೆ ಸಂಖ್ಯೆ 71/3 ರ ಮೂಲ ಸರ್ವೆ ಸಂಖ್ಯೆ 71/2 ಎ+2 ಬಿ/2+3+4 ಇರುತ್ತದೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ನೀಡಿ ಅದರಲ್ಲಿ ಕ್ಷೇತ್ರ ಎಷ್ಟು ಇದೆ ಎಂದು ಕೇಳಲಾಗಿ ಸಾಕ್ಷಿಯು ಅದರಲ್ಲಿ 7 ಎಕ್ರೆ 36 ಗುಂಟೆ ಮತ್ತು ಅದರಲ್ಲಿ ಹೆಸರುಗಳು ಗದಿಗೆಪ್ಪ ಫಕ್ಕೀರಪ್ಪ ಕುಲಕರ್ಣಿ ಹಾಗೂ ಮಹಾದೇವಪ್ಪ ಪರಪ್ಪ ಕುಲಕರ್ಣಿ ಅಂತಾ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಅದು ಸರಿ ಇದೆಯಾ ಎಂದು ಕೇಳಲಾಗಿ ಸರಿ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ಸರ್ವೆ ಸಂಖ್ಯೆ 71 ಹಿಸ್ಸಾ 2 ಅ+2 ಬ/2+3+4 ಕೈಬರಹದ ಪಹನಿ ಪತ್ರಿಕೆಯ ದೃಡಿಕೃತ ಪ್ರತಿಯಾಗಿದ್ದು ಅದನ್ನು ನಿ**.**ಡಿ**.1** ಎಂದು ಗುರುತಿಸಲಾಯಿತು.

10) ಸರ್ವೆ ಸಂಖ್ಯೆ 71/1 ವೆಂಕಪ್ಪ @ ವೆಂಕಣ್ಣ ಕುಲಕರ್ಣಿ ರವರ ಹೆಸರಿನಲ್ಲಿ ಇರುತ್ತದೆ. ಅದರ ಕ್ಷೇತ್ರದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸರ್ವೆ ಸಂಖ್ಯೆ 71/1 ರ ಮೂಲ ಮಾಲೀಕರು ಬಸವಂತಪ್ಪ, ಪರಪ್ಪ, ದೇವಪ್ಪ, ಈರವ್ವ ಗಡಿಯಪ್ಪಗೌಡ ಪಾಟೀಲ ಎಂದರೆ ಸರಿ. 71/1 ರ ಕ್ಷೇತ್ರ 03 ಎಕ್ರೆ 34 ಗುಂಟೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು

ತೋರಿಸಿ ಅದು 71/1 ರ 1994 ರ ಕೈಬರಹದ ಉತಾರ ಎಂದರೆ ಸರಿ. ಸದರಿ ದೃಡಿಕೃತ ದಾಖಲೆಯನ್ನು ನಿ.ಡಿ.**2** ಎಂದು ಗುರುತಿಸಲಾಯಿತು.

11) ದಾವಾ ಆಸ್ತಿಯ ಮೂಲತಃ ಕ್ಷೇತ್ರ 14 ಎಕ್ರೆ 22 ಗುಂಟೆ ಇರುತ್ತದೆ. ಅದು ಯಾರ ಹೆಸರಿನಲ್ಲಿ ಇತ್ತು ಎಂದು ಕೇಳಲಾಗಿ ಸಾಕ್ಷಿಯು ಮಹಾದೇವಪ್ಪ ಪರಪ್ಪ ಕುಲಕರ್ಣಿ, ಗದಿಗೆಪ್ಪಗೌಡ ಕುಲಕರ್ಣಿ ರವರು 7 ಎಕ್ರೆ 36 ಗುಂಟೆ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಖರೀದಿ ಪತ್ರವನ್ನು ನಾನು ಹಾಜರು ಪಡಿಸಿದ್ದು, ಸಾಕ್ಷಿಯು ತಾನು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ನಿಪಿ-10 ನ್ನು ತೋರಿಸುತ್ತಾರೆ. ನನ್ನ ಅನುಸಾರ ನಿಪಿ-10 ಖರೀದಿ ಪತ್ರ ಇರುತ್ತದೆ ಕಾರಣ ಅದು ಹಳೆಯ ಕಾಲದ್ದು ಇರುತ್ತದೆ.

12) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ಪರಿಶೀಲಿಸಲು ನೀಡಿ ಅದು ಯಾರ ಹೆಸರಿನಲ್ಲಿ ಇದೆ ಎಂದು ಕೇಳಲಾಗಿ ಸಾಕ್ಷಿಯು ಮಹಾದೇವಪ್ಪ ಪರಪ್ಪ ಕುಲಕರ್ಣಿ, ಗದಿಗೆಪ್ಪಗೌಡ ಕುಲಕರ್ಣಿ ರವರ ಹೆಸರು ಇರುತ್ತದೆ ಅದರಲ್ಲಿ ಕ್ಷೇತ್ರ 05 ಎಕ್ರೆ ನಮೂದು ಇರುತ್ತದೆ ಅದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯು 1962 ರ ಖರೀದಿ ಪತ್ರದ ಗಣಕೀಕೃತ ದೃಡಿಕೃತ ಪ್ರತಿಯಾಗಿದ್ದು ಅದನ್ನು ನಿ.ಡಿ.**3** ಎಂದು ಗುರುತಿಸಲಾಯಿತು.

13) ಮಹಾದೇವಪ್ಪ ಪರಪ್ಪ ಕುಲಕರ್ಣಿ ಹಾಗೂ ಗದಿಗೆಪ್ಪಗೌಡ ಕುಲಕರ್ಣಿ ರವರು ಮೂಲತಃ ಫಕ್ಕೀರಪ್ಪ ರವರ ಮಕ್ಕಳು ಎಂದರೆ ಮಹಾದೇವಪ್ಪನ ತಂದೆ ಪರಪ್ಪ ಗದಿಗೆಪ್ಪನ ತಂದೆ ಫಕ್ಕೀರಪ್ಪ ಎಂದು ನುಡಿಯುತ್ತಾರೆ.

14) 71/2 ಎ+2 ಬಿ/2+3+4 ರಲ್ಲಿ ವಿಭಾಗವಾದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು 2021 ರಲ್ಲಿ ಎಪಡಿಪಿ ಪ್ರಕರಣ ಆಗಿದೆ ಎಂದು ನುಡಿದು ಪ್ರಶ್ನೆಗೆ ಯಾವುದೇ ಸಂಮಜಸವಾದ ಉತ್ತರ ನೀಡಿಲ್ಲ. ದಾವಾ ಆಸ್ತಿಯು ನಮಗೆ ಬಂದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ, ಸಾಕ್ಷಿಯು ನಿಪಿ-2, ನಿಪಿ-6 ರ ಲಗತ್ತು

ಸರ್ವೆ ನೋಟಿಸನ ದಾಖಲೆ, ವಕೀಲರು ನೀಡಿದ ನೋಟಿಸ, ನಿಪಿ-7 ರಿಂದ ನಿಪಿ-15, ನಿಪಿ-17 ರಿಂದ ನಿಪಿ-21 ದಾಖಲೆಗಳನ್ನು ತೋರಿಸುತ್ತಾರೆ.

15) ಸಾಕ್ಷಿಗೆ ಈಗ ನಿಪಿ-14 ತೋರಿಸಿ ಅದರಲ್ಲಿ ಸಾಕ್ಷಿಯು ಸರ್ವೆ ಸಂಖ್ಯೆ 71/2 ಎ+2 ಬಿ/2+3+4 ಅದರ ಕ್ಷೇತ್ರ 07 ಎಕ್ರೆ 36 ಗುಂಟೆ ಪಿ.ಕೆ. 12 ಗುಂಟೆ ಒಟ್ಟು 7.24 ಗುಂಟೆ ಅದು ಗದಿಗೆಪ್ಪ ಫಕ್ಕೀರಪ್ಪ ಕುಲಕರ್ಣಿ ಹಾಗೂ ಮಹಾದೇವಪ್ಪ ಪರಪ್ಪ ಕುಲಕರ್ಣಿ, ಬಸವಂತೆಪ್ಪ, ಪರಪ್ಪ, ದೇವಪ್ಪ ಹಾಗೂ ಈರವ್ವ ಮತ್ತು ಗುರುಶಾಂತವ್ವ ತಂದೆ ಮಹಾದೇವಪ್ಪ ಕುಲಕರ್ಣಿ ರವರ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಗದಿಗೆಪ್ಪ ಫಕ್ಕೀರಪ್ಪ ಕುಲಕರ್ಣಿ ಹಾಗೂ ಮಹಾದೇವಪ್ಪ ಪರಪ್ಪ ಕುಲಕರ್ಣಿ ರವರ ಹೆಸರುಗಳನ್ನು ಕಡಿಮೆ ಮಾಡಿ ಬಸವಂತಪ್ಪ, ಪರಪ್ಪ, ದೇವಪ್ಪ ಗದಿಗೆಪ್ಪ, ಈರವ್ವ ಬ್ರಹತ ಗಡಿಯಪ್ಪಗೌಡ ಪಾಟೀಲ ಹಾಗೂ ಗುರುಶಾಂತವ್ವ ತಂದೆ ಮಹಾದೇವಪ್ಪ ಕುಲಕರ್ಣಿ ರವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ನಿಪಿ-14 ರಲ್ಲಿ ಗುರುಶಾಂತವ್ವ ತಂದೆ ಮಹಾದೇವಪ್ಪ ಕುಲಕರ್ಣಿ ರವರ ಹೆಸರು 2 ನೇ ಕಾಲಂನಲ್ಲಿ ನಮೂದಾಗಿರುತ್ತದೆ ಮತ್ತು ಉಳಿದವರ ಹೆಸರು ಕಾಲಂ ನಂ.9 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ.

16) 1962 ರಿಂದ ನಾವು ಮಾಲೀಕರು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ದಾಖಲೆ ತೋರಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೆ ಯಾವುದೇ ಸಂಬಂದವಿಲ್ಲ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲಾ ಅಂದರೆ ಸರಿಯಲ್ಲ.

17) ದಾವಾ ಆಸ್ತಿಯಲ್ಲಿ ಪ್ರತಿವಾದಿಯ ಅಜ್ಜನ ಕಾಲದಿಂದ ಶೆಡ ನಿರ್ಮಾಣವಾಗಿದ್ದು ಅವರ ಅಜ್ಜನ ಕಾಲದಿಂದ ಇಲ್ಲಿಯವರೆಗೆ ಅವರೇ ಅದರ ಕಬ್ಜಾ ವಹಿವಾಟಿನಲ್ಲಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕರೋನಾ ಸಮಯದಲ್ಲಿ ಶೆಡ ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣಾ

ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಸಂತೋಷ ನ್ಯಾಯಾಧೀಶರ ಎದುರು ನಾನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಇಂದು ಪ್ರಥಮವಾಗಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**